# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 101 | Pages. 2 | Date: 22-03-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 101 - ಪುಟಗಳು : 2 | 22-03-2026 | ಭಾನುವಾರ | Ph: 8762954248 | ದರ : ₹1


# ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅಸಹಾಯಕರಾ?

## ಸಂಸದ ಶ್ರೇಯಸ್ ಪಟೇಲ್ ತೀಕ್ಷ್ಣವಾಗ್ದಾಳಿ | ಹಕ್ಕುಚ್ಯುತಿ ಮಂಡನೆಗೆ ವಿರೋಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಜಿ ಪ್ರಧಾನಿ, ಮಾಜಿ ಮುಖ್ಯಮಂತ್ರಿ ಕುಟುಂಬದಿಂದ ಬಂದವರು ಮಾತ್ರವಲ್ಲದೆ ತಾವೂ ಸಚಿವ, ನಾಲ್ಕು ಬಾರಿ ಶಾಸಕರಾಗಿ ಆಡಳಿತ ಅನುಭವ ಇರುವವರು ಅಧಿಕಾರಿಗಳನ್ನು ಹೆದರಿಸಲು ಹಕ್ಕುಚ್ಯುತಿ ಮಂಡಿಸಿರುವುದು ಅವರ ಅಸಹಾಯಕತೆಯೇ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಮಾಜಿ ಸಚಿವ ಹೆಚ್.ಡಿ.ರೇವಣ್ಣ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದ ಸಂಸದರ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾಧಿಕಾರಿ ಹಾಗೂ ಇತರೆ ಅಧಿಕಾರಿಗಳ ವಿರುದ್ಧ ಸದನದಲ್ಲಿ ಹಕ್ಕುಚ್ಯುತಿ ಮಂಡಿಸುವುದು ಒಳ್ಳೆಯ ಬೆಳವಣಿಗೆ ಅಲ್ಲ. ಅಧಿಕಾರಿಗಳಿಗೆ ತೊಂದರೆ ಕೊಡುವುದು, ಬೆಳೆಯುತ್ತಿರುವವರನ್ನು ಟಾರ್ಗೆಟ್ ಮಾಡುವುದು ಅವರ ಹಿರಿತನಕ್ಕೆ ಶೋಭೆ ತರುವುದಿಲ್ಲ ಎಂದು ಜನರು ಮಾತಾಡುತ್ತಿದ್ದಾರೆ. ಅದನ್ನು ಅರಿತು ತಿದ್ದುಕೊಂಡರೆ ಒಳ್ಳೆಯದು, ಜಿಲ್ಲೆಯ ಜನರು ಪ್ರಜ್ಞಾವಂತರಿದ್ದಾರೆ. ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಜಿಲ್ಲಾಧಿಕಾರಿ ಅವರು ಅಧಿಕಾರಿಗಿಂತ ಮೊದಲು ಮಹಿಳೆ, ಪ್ರಾಮಾಣಿಕ ಕೆಲಸ ಮಾಡುತ್ತಿರುವ ಅವರಿಗೆ ಸಹಕಾರ ಕೊಡಲಿ. ಶಾಸಕರ ಹಕ್ಕಿಗೆ ಧಕ್ಕೆ ಯಾವ ರೀತಿ ಆಗಿದೆ, ಸತ್ಯಾಸತ್ಯತೆಯನ್ನು ಸಮಿತಿ ಅಧ್ಯಕ್ಷರು ತೀರ್ಮಾನ ಮಾಡುತ್ತಾರೆ, ಆದರೆ ಹಕ್ಕುಚ್ಯುತಿ ಮಂಡಿಸುವ ಮುನ್ನ ತಪ್ಪಾಗಿದೆಯೇ ಎಂದು ಆತ್ಮಾವಲೋಕ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಶಾಸಕರು ಅಸಹಾಯಕರು ಎಂಬ ಸಂದೇಶ ರವಾನೆ ಆಗಲಿದೆ ಎಂದು ಟೀಕಿಸಿದರು. ನನ್ನ ಪ್ರಕಾರ ಯಾವುದೇ ಹಕ್ಕುಚ್ಯುತಿ ಆಗಿಲ್ಲ ಎಂದು ಶ್ರೇಯಸ್ ಸ್ಪಷ್ಟಪಡಿಸಿದರು.



> ಜಿಲ್ಲೆಯಲ್ಲಿ ಪೊಲೀಸರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಗಾಂಜಾ ವ್ಯಸನಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಬೇಸರದ ವಿಷಯ. ಈ ಸಂಬಂಧ ಪೊಲೀಸರಿಂದ ನಿರಂತರ ಮಾಹಿತಿ ಪಡೆಯುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಸಭೆ ನಡೆಸಿ ಎಲ್ಲ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು.
>
> **- ಶ್ರೇಯಸ್ ಪಟೇಲ್, ಸಂಸದ**

ಈಗ ಅಧಿಕಾರಿಗಳು ಕಾಂಗ್ರೆಸ್ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ ಎನ್ನುವವರು, ಅವರು ಅಧಿಕಾರದಲ್ಲಿದ್ದಾಗ ಹಿಂದೆ ಏನೇನು ಮಾಡಿದ್ದಾರೆ ಎಂದು ಅವಲೋಕನ ಮಾಡಿಕೊಳ್ಳಲಿ ಎಂದು ತಿರುಗೇಟು ನೀಡಿದರು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಜಿಲ್ಲೆಯ ಹಲವು ಅಧಿಕಾರಿಗಳಿಗೆ ಒಂದಲ್ಲ, ಒಂದು ರೀತಿಯ ಕಿರುಕುಳ ನೀಡುತ್ತಿದ್ದು, ಹಿರಿಯರಾಗಿರುವ ಅವರು ಇದನ್ನು ಕೂಡಲೇ ನಿಲ್ಲಿಸಿ, ಎಲ್ಲರಿಗೂ ಮಾರ್ಗದರ್ಶನ ಮಾಡಲಿ. ಅವರ ಹಿರಿತನಕ್ಕೆ ತಕ್ಕಂತೆ ನಡೆದುಕೊಳ್ಳಲಿ, ಅಧಿಕಾರ ದುರುಪಯೋಗ ಪಡಿಸಿಕೊಂಡು ಸುಖಾಸುಮ್ಮನೆ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ನಮ್ಮ ಮುಖಂಡರು, ಕಾರ್ಯಕರ್ತರಿಗೆ ಇಲ್ಲ ಸಲ್ಲದ ಆರೋಪ ಮಾಡುವುದು ಬೇಡ ಎಂದರು.

ಅನುಭವ ಹೊಂದಿರುವ ಅವರು ಆಡಳಿತ ಹೇಗೆ ಮಾಡಬೇಕೆಂದು ಬುದ್ಧಿ ಹೇಳಲಿ, ಜಿಲ್ಲೆಯ ಅಭಿವೃದ್ಧಿ ಹಾಗೂ ಕುಡಿಯುವ ನೀರು, ರಸ್ತೆ ಇತ್ಯಾದಿ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಅನುದಾನ ತರಲಿ, ಆದರೆ ಸಣ್ಣಪುಟ್ಟ ಕಾರಣಕ್ಕೂ ಹಕ್ಕು ಚ್ಯುತಿ ಮಂಡಿಸಿ ತೇಜೋವಧೆ ಕೆಲಸ ಮಾಡಲಿ ಎಂದು ಕುಟುಕಿದರು.

ಅಧಿಕಾರಿಗಳೆಲ್ಲ ಒಳ್ಳೆಯವರು ಎಂದು ನಾನು ಹೇಳಲ್ಲ, ಪ್ರಾಮಾಣಿಕ ಅಧಿಕಾರಿಗಳೂ ಇದ್ದಾರೆ. ಅವರಿಂದ ಕೆಲಸ ಮಾಡಿಸುವುದು ಜನಪ್ರತಿನಿಧಿಗಳಾದ ನಮ್ಮ ಜವಾಬ್ದಾರಿ, ಅದನ್ನು ಬಿಟ್ಟು ಆರೋಪ ಮಾಡುವುದು ಒಳ್ಳೆಯ ಬೆಳವಣಿಗೆ ಅಲ್ಲ ಎಂದರು.

ಹೊಳೆನರಸೀಪುರದ ಲಕ್ಷ್ಮೀನರಸಿಂಹಸ್ವಾಮಿ ರಥಕ್ಕೆ ಹೊಸ ವಸ್ತ್ರ ಹೊದಿಸುವ ಸಂಬಂಧ ನಾನು ದೇಣಿಗೆ ನೀಡಿದ ನಂತರ ತಗಾದೆ ತೆಗೆದರು. ಲಕ್ಷ್ಮೀನರಸಿಂಹ ಸ್ವಾಮಿ ಯಾರ ಮನೆಯ ಸ್ವತ್ತಲ್ಲ, ಸರ್ವರ ಆರಾಧ್ಯದೈವ. ಅವರು ಮಾಜಿ ಪ್ರಧಾನಿ, ಮಾಜಿ ಮುಖ್ಯಮಂತ್ರಿ ಮನೆಯವರು, ಅವರು ಎಲ್ಲರಿಗೂ ಬುದ್ಧಿವಾದ ಹೇಳ ಬಹುದಿತ್ತು ಎಂದು ಟಾಂಗ್ ನೀಡಿದರು.

### ಚಾರ್ಜ್ ಶಿಟ್‌ನಲ್ಲಿ ನಮ್ಮ ಹಸ್ತಕ್ಷೇಪವಿಲ್ಲ

ಪೆನ್‌ಡ್ರೈವ್ ಹಂಚಿಕೆ ಸಂಬಂಧ ಚಾರ್ಜ್‌ಶೀಟ್‌ನಲ್ಲಿ ಹೆಸರಿರುವವರು ಯಾವ, ಯಾವ ಪಕ್ಷಗಳಿಗೆ ಸೇರಿದವರು ಎಂಬುದು ನನಗೆ ಗೊತ್ತಿಲ್ಲ, ಆದರೆ ಸತ್ಯಾಸತ್ಯತೆಯನ್ನು ಕೋರ್ಟ್ ತೀರ್ಮಾನ ಮಾಡಲಿದೆ. ಸ್ಥಳೀಯ ಶಾಸಕರಿಗೆ ಅನುಮಾನ ಇದ್ದರೆ ಉನ್ನತಮಟ್ಟದ ತನಿಖೆ ಮಾಡಿಸಲಿ,ನಾವು ಮೂಗು ತೂರಿಸಿಲ್ಲ, ಯಾರ ಹೆಸರು ಸೇರಿಸಿದ್ದಾರೆ, ಯಾರ ಹೆಸರು ಕೈ ಬಿಟ್ಟಿದ್ದಾರೆ ನನಗೆ ಗೊತ್ತಿಲ್ಲ ಎಂದು ಶ್ರೇಯಸ್ ಪಟೇಲ್ ಸ್ಪಷ್ಟಪಡಿಸಿದರು.

ಸದ್ಯ ಗೃಹಬಳಕೆ ಸಿಲಿಂಗಡ್ ಸಮಸ್ಯೆ ಇಲ್ಲ. ಆದರೂ ಮುನ್ನೆಚ್ಚರಿಕೆ ಯಿಂದ ಮಿತವಾಗಿ ಬಳಸಿ, ಆದರೆ ವಾಣಿಜ್ಯ ಸಿಲಿಂಡರ್ ಲಭ್ಯತೆ ಇಲ್ಲ. ಸೋಮವಾರ ಕೇಂದ್ರದ ಗಮನ ಸೆಳೆಯುವೆ. ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು.ಕೇಂದ್ರ ಸರ್ಕಾರ ವಾಣಿಜ್ಯ ಸಿಲಿಂಡರ್ ಸಮಸ್ಯೆ ಸರಿಪಡಿಸಬೇಕು. ಎಲ್‌ಪಿಜಿ ವಿಷಯದಲ್ಲಿ ರಾಜಕೀಯ ಮಾಡೋದು ಬೇಡ ಎಂದು ಮನವಿ ಮಾಡುವೆ. ಇದಕ್ಕೆಲ್ಲ ಕೇಂದ್ರದ ವೈಫಲ್ಯ ಕಾರಣ, ಮುಂಚೆಯೇ ಸಭೆ ಕರೆದು ಪೂರ್ವಸಿದ್ಧತೆ ಮಾಡಿಕೊಳ್ಳಬೇಕಿತ್ತು. ಇನ್ನಾದರೂ ಎಚ್ಚೆತ್ತುಕೊಳ್ಳಲಿ ಎಂದರು.

# ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಯುವಕ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಕೋಡನಹಳ್ಳಿ ರಸ್ತೆ ತಿರುವಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಮಾರುತಿ ಆಲ್ಟೋ ಕಾರು ನಡುವೆ ಅಪಘಾತದಲ್ಲಿ ಕಾರು ಚಾಲಕ ಮೃತಪಟ್ಟು ಇಬ್ಬರು ಗಾಯಗೊಂಡಿದ್ದಾರೆ.

ತಾಲ್ಲೂಕಿನ ಬೆನ್ನೂರು ಗ್ರಾಮದ ದಿಕ್ಷೀತ್ (29) ಮೃತ ಯುವಕ. ಅದೇ ಗ್ರಾಮದ ಅನಿಲ್ ಹಾಗೂ ರುದ್ರೇಶ್ ಎಂಬುವವರು ಗಾಯಗೊಂಡಿದ್ದು ಹಿಮ್ಸ್‌ಗೆ ದಾಖಲಿಸಲಾಗಿದೆ.

ಶುಕ್ರವಾರ ಸಂಜೆ ಬೆನ್ನೂರಿನಿಂದ ವೇಗವಾಗಿ ಬಂದ ಬಸ್ ಚಾಲಕ ನಿಯಂತ್ರಣ ತಪ್ಪಿ ಕಾರಿಗೆ ಡಿಕ್ಕಿ ಮಾಡಿದ್ದಾನೆ. ಅಪಘಾತದ ರಭಸಕ್ಕೆ ಗಂಭೀರ ಗಾಯಗೊಂಡಿದ್ದ ದಿಕ್ಷೀತ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರು ಸಂಪೂರ್ಣ ಜಖಂಗೊಂಡಿದೆ.

ಶನಿವಾರ ಬೆಳಿಗ್ಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿದ ಶಾಸಕ ಹೆಚ್.ಕೆ.ಸುರೇಶ್ ಅವರು ಮೃತ ದಿಕ್ಷೀತ್ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ಶಾಸಕರು, ಕೆಎಸ್‌ಆರ್‌ಟಿಸಿ ಬಸ್ ಹಾಗು ಕಾರು ಡಿಕ್ಕಿಯಾಗಿ ಯುವಕ ಮೃತಪಟ್ಟಿದ್ದಾನೆ. ಅಪಘಾತದಲ್ಲಿ ಗಾಯಗೊಂಡಿದ್ದ ಇಬ್ಬರಿಗೆ ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಹಿಮ್ಸ್‌ಗೆ ದಾಖಲಿಸಲಾಗಿದೆ. ಕುಟುಂಬಕ್ಕೆ ಆಧಾರವಾಗಿದ್ದ ಯುವಕ ಮೃತಪಟ್ಟಿದ್ದು ದು:ಖ ತರಿಸಿದೆ. ನೊಂದ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ಕಲ್ಪಿಸಿಕೊಡಲಾಗುವುದು ಎಂದರು.

ವೃತ್ತ ನಿರೀಕ್ಷಕ ರೇವಣ್ಣ, ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹಾಜರಿದ್ದರು.

# ಒಳಮೀಸಲಾತಿ ವಿರೋಧಿಸಿ ಮಾ.25ಕ್ಕೆ ಬೆಂಗಳೂರಿನಲ್ಲಿ ಪ್ರತಿಭಟನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ವತಿಯಿಂದ ಒಳಮೀಸಲಾತಿ ರಹಿತ ಹಳೆಯ ಮೀಸಲಾತಿ ಜಾರಿಗಾಗಿ ಒತ್ತಾಯಿಸಿ ಮಾ.25ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಪುರಸಭಾ ಮಾಜಿ ಅಧ್ಯಕ್ಷ ಕಾಡಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಭಾರತದ ಸರ್ವೋಚ್ಚ ನ್ಯಾಯಾಲಯವು ಆಗಸ್ಟ್ 2024ರಲ್ಲಿ ಒಳಮೀಸಲಾತಿ ನೀಡುವ ಅಧಿಕಾರ ರಾಜ್ಯಗಳಿಗೆ ಇದ್ದರೂ, ಅದು ಸಮಗ್ರ ಅಂಕಿ ಅಂಶಗಳ ಆಧಾರದ ಮೇಲೆ ಮಾತ್ರ ನೀಡಬೇಕು ಎಂದು ಸ್ಪಷ್ಟಪಡಿಸಿದೆ. ಆದರೆ, ರಾಜ್ಯ ಸರ್ಕಾರವು ನ್ಯಾ. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಏಕಸದಸ್ಯ ಆಯೋಗವು ಸಮಗ್ರ ಸಮೀಕ್ಷೆ ನಡೆಸದೇ ವರದಿ ನೀಡಿದೆ ಎಂದು ಆರೋಪಿಸಿದರು.

ಈ ವರದಿಯಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಜನಸಂಖ್ಯೆಯನ್ನು ವಿಭಜನೆ ಮಾಡಿ ಅಸಮಾನ ರೀತಿಯಲ್ಲಿ ಮೀಸಲಾತಿ ಶಿಫಾರಸ್ಸು ಮಾಡಲಾಗಿದೆ. ಇದರಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದ್ದು, ಅವರಿಗೆ ಸಿಗಬೇಕಾದ ಮೀಸಲಾತಿ ಸೌಲಭ್ಯಗಳನ್ನು ಕಡಿತಗೊಳಿಸುವ ಪ್ರಯತ್ನ ನಡೆದಿದೆ ಎಂದು ಆರೋಪಿಸಿದರು.

ಇದಲ್ಲದೆ, ಸರ್ಕಾರವು ಬಲಗೈ ಸಮುದಾಯವನ್ನು ಬಿ ಗುಂಪಿಗೆ ಸೇರಿಸಿ ಉನ್ನತ ಹುದ್ದೆಗಳ ಅವಕಾಶಗಳನ್ನು ಕಡಿತಗೊಳಿಸುವ ಕ್ರಮ ಕೈಗೊಂಡಿದೆ. ಸಾಮಾನ್ಯ ವರ್ಗದಲ್ಲಿಯೂ ಆಯ್ಕೆಯಾಗಿರುವವರನ್ನು ಒಟ್ಟು ಸಂಖ್ಯೆಗೆ ಸೇರಿಸಿ ತಪ್ಪು ಚಿತ್ರಣ ನೀಡಲಾಗಿದೆ ಎಂದು ದೂರಿದರು.

ಉಚ್ಚ ನ್ಯಾಯಾಲಯವು ಮೀಸಲಾತಿ ಪ್ರಮಾಣದ ಕುರಿತಂತೆ ತಡೆಯಾಜ್ಞೆ ನೀಡಿದ ಹಿನ್ನೆಲೆಯಲ್ಲಿ, ಸರ್ಕಾರವು ಶೇ. 15+3 ಮೀಸಲಾತಿಯನ್ನು ಒಳಮೀಸಲಾತಿ ಇಲ್ಲದೆ ಜಾರಿಗೊಳಿಸಲು ಆದೇಶ ಹೊರಡಿಸಿದೆ. ಆದರೆ, ಮತ್ತೆ ಒಳಮೀಸಲಾತಿ ಜಾರಿಗೆ ಒತ್ತಾಯ ನಡೆಯುತ್ತಿರುವುದರಿಂದ ಮಾ.27ರಂದು ಸಚಿವ ಸಂಪುಟದ ವಿಶೇಷ ಸಭೆ ಕರೆದಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೆತ್ತೂರು ಅಣ್ಣಯ್ಯ, ವಳಲಹಳ್ಳಿ ವೀರೇಶ್, ನಲ್ಲೂಲಿ ಈರಪ್ಪ, ಕುಮಾರಯ್ಯ, ಬೆಳಗೋಡು ಬಸವರಾಜ್, ಸೋಮಶೇಖರ್ ಹಾಜರಿದ್ದರು.

# ರಾಸುಗಳ ಆರೋಗ್ಯ ರಕ್ಷಣೆಯಲ್ಲಿ ನೆಲಹಾಸು ಮಹತ್ವದ ಪಾತ್ರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರೈತರು ಕೊಟ್ಟಿಗೆಯಲ್ಲಿ ರಬ್ಬರ್ ನೆಲಹಾಸು (ಮ್ಯಾಟ್) ಅಳವಡಿಸುವುದರಿಂದ ಸ್ವಚ್ಛತೆ, ಸಮತೋಲಿತ ಪೋಷಣೆ, ಕೆಚ್ಚಲಿನ ನೈರ್ಮಲ್ಯದೊಂದಿಗೆ ಹಸುಗಳ ಆರೋಗ್ಯ ರಕ್ಷಣೆ ಹಾಗೂ ಅಧಿಕ ಹಾಲು ಪಡೆಯಬಹುದಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಶೆಟ್ಟಿಹಳ್ಳಿ ಹಾಲು ಶಿತಲೀಕರಣ ಘಟಕದಲ್ಲಿ ಶನಿವಾರ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹಾಲು ಉತ್ಪಾದಕ ಸದಸ್ಯರಿಗೆ ರಬ್ಬರ್ ನೆಲಹಾಸು ವಿತರಿಸಿ ಮಾತನಾಡಿದ ಅವರು, ರೈತ ಸಮುದಾಯವು ತಮ್ಮ ಆರ್ಥಿಕತೆಯ ಪ್ರಮುಖ ಮೂಲವಾಗಿರುವ ಪಶುಸಂಗೋಪನೆಯ ಉತ್ತಮ ಲಾಭ ಪಡೆಯಬೇಕಾದರೆ ರಾಸುಗಳ ಆರೋಗ್ಯ ಉತ್ತಮವಾಗಿರುವುದು ಕೂಡ ಮುಖ್ಯ. ಈ ನಿಟ್ಟಿನಲ್ಲಿ ದನ ಕರುಗಳು ವಾಸಿಸುವ ಜಾಗ ಸ್ವಚ್ಛವಾಗಿರುವುದು ಮುಖ್ಯವಾಗುತ್ತದೆಂದರು.



ಜಾನುವಾರುಗಳು ಮಲಗಿದ್ದಾಗ ಕೆಚ್ಚಲು ನೆಲದ ಸಂಪರ್ಕಕ್ಕೆ ಬರುತ್ತದೆ. ಹೈನು ರಾಸುಗಳಲ್ಲಿ ಕೆಚ್ಚಲು ಬಾವು ಬರುವ ಸಾಧ್ಯತೆಗಳು ಹೆಚ್ಚಿರುತ್ತದೆ. ಅದರಿಂದ ಹಾಲಿನ ಉತ್ಪಾದನೆ ಗಣನೀಯವಾಗಿ ಇಳಿಮುಖವಾಗುತ್ತದೆ. ಹಸುವಿನ ಉತ್ಪಾದನಾ ಮಟ್ಟವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕಾದರೆ ನೆಲಹಾಸು ಮುಖ್ಯವಾಗಿದೆ ಎಂದು ಸಲಹೆ ನೀಡಿದರು.

ರಾಜ್ಯದಲ್ಲೇ ಹಾಲು ಉತ್ಪಾದನೆಯಲ್ಲಿ ಹಾಸನ ಹಾಲು ಒಕ್ಕೂಟ 2ನೇ ಸ್ಥಾನದಲ್ಲಿದೆ. ಚನ್ನರಾಯಪಟ್ಟಣ ತಾಲ್ಲೂಕು ರಾಜ್ಯಕ್ಕೆ 4ನೇ ಸ್ಥಾನ ಪಡೆದಿದೆ. ಡೈರಿ ಉದ್ಯಮದ ಬೆಳವಣಿಗೆಗೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಕೊಡುಗೆ ಅಪಾರವಾಗಿದೆ. ಜಿಲ್ಲೆಯ ರೈತರು ಆರ್ಥಿಕವಾಗಿ ಸದೃಢಗೊಳ್ಳಲು ಅವರ ದೂರದೃಷ್ಟಿಯೇ ಕಾರಣ. ಮುಂದಿನ ದಿನಗಳಲ್ಲಿ ಮೆಗಾ ಡೈರಿ ಉದ್ಘಾಟನೆಯಾಗಲಿದೆ ಎಂದರು.

ಹಾಸನ ಹಾಲು ಒಕ್ಕೂಟದ ಅಧ್ಯಕ್ಷ ಹೆಚ್.ಡಿ. ರೇವಣ್ಣ ಅವರು ಮೂರು ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರಿ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಿದ್ದು ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸಲಿದ್ದಾರೆ. ಈ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರೊಂದಿಗೆ ಚರ್ಚಿಸಲಾಗಿದೆ ಎಂದು ಹೇಳಿದರು.

ತಾಲ್ಲೂಕಿನ 280 ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ 1.5 ಕೋಟಿ ರೂ. ವೆಚ್ಚದಲ್ಲಿ 6000 ರಬ್ಬರ್ ನೆಲಹಾಸು ವಿತರಿಸಲು ಕ್ರಮ ಕೈಗೊಂಡಿದ್ದು ತಾಲೂಕಿನಲ್ಲಿ ರಬ್ಬರ್ ನೆಲಹಾಸುಗಳ ಬೇಡಿಕೆ ಹೆಚ್ಚಾಗಿದ್ದು 20,000 ನೆಲ ಹಾಸುಗಳ ಅವಶ್ಯಕತೆ ಇದ್ದು, ಹಂತ ಹಂತವಾಗಿ ಬೇಡಿಕೆಗೆ ಅನುಗುಣವಾಗಿ ಎರಡನೇ ಹಂತದಲ್ಲಿ ವಿತರಣೆಗೆ ಕ್ರಮವಹಿಸಲಾಗುವುದು ಎಂದರು.

ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಜಾನುವಾರು ವಿಮಾ ಯೋಜನೆಯಲ್ಲಿ ಹಣ ಪಾವತಿಸಿದರೆ, ರೈತರ ಜಾನುವಾರುಗಳು ವಿಮೆ ವ್ಯಾಪ್ತಿಗೆ ಒಳಪಡಲಿದ್ದು, ಒಂದು ವೇಳೆ ಅವು ಆಕಸ್ಮಿಕವಾಗಿ ಮೃತಪಟ್ಟರೆ ಗರಿಷ್ಠ 50 ಸಾವಿರ ರೂ.ವರೆಗೆ ವಿಮಾ ಮೊತ್ತ ಪಾಲಕನ ಕೈಗೆ ದೊರೆಯಲಿದೆ. ಜಾನುವಾರು ಮಿಷನ್ ಯೋಜನೆಯ ಜಾನುವಾರು ವಿಮೆ ಕಾರ್ಯಕ್ರಮ, ರೋಗ ಅಥವಾ ಅಪಘಾತದಿಂದ ಜಾನುವಾರು ಸಾವಾಗುವ ಸಂಭವಿತ ನಷ್ಟದಿಂದ ಪಶುಪಾಲಕರಿಗೆ ರಕ್ಷಣೆ ನೀಡುತ್ತದೆ ಎಂದು ಮಾಹಿತಿ ನೀಡಿದರು.

ಹಾಸನ ಹಾಲು ಒಕ್ಕೂಟದ ನಿರ್ದೇಶಕಿ ವಸಂತ ಶಿವಣ್ಣ, ಮುಖಂಡರಾದ ಶಿವಣ್ಣ, ವಳಗೇರಹಳ್ಳಿ ಮಂಜಣ್ಣ ,ಹಾಲು ಶೀತಲೀಕರಣ ಘಟಕದ ಸಹಾಯಕ ವ್ಯವಸ್ಥಾಪಕ ಎಂ. ದಯಾನಂದ, ಸಿ.ಸಿ.ಯೋಗೀಶ್, ಟಿ.ಕೃಷ್ಣಮೂರ್ತಿ, ವಿಸ್ತರಣಾಧಿಕಾರಿಗಳಾದ ವಿದ್ಯಾ, ಪ್ರಶಾಂತ್ ಇತರರಿದ್ದರು.


# ಸಕಲೇಶಪುರದಲ್ಲಿ ಅರ್ಥಪೂರ್ಣ ರಂಜಾನ್ ಆಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಂಜಾನ್ ತಿಂಗಳ ಉಪವಾಸವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮುಸ್ಲಿಂ ಬಾಂಧವರು ಈದ್-ಉಲ್-ಫಿತರ್ ಹಬ್ಬವನ್ನು ಶನಿವಾರ ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ಈದ್ಗಾ ಮೈದಾನದಲ್ಲಿ ಹಬ್ಬದ ವಿಶೇಷ ನಮಾಝ್ ಸಲ್ಲಿಸಿದರು. ಪ್ರಾರ್ಥನೆಯ ಬಳಿಕ ಮುಫ್ತಿ ಮುಹಮ್ಮದ್ ತಲ್ಹಾ ಮಾತನಾಡಿ, ಪ್ರವಾದಿ ತೋರಿಸಿದ ಹಾದಿಯನ್ನು ನಿಷ್ಠೆಯಿಂದ ಅನುಸರಿಸಿದರೆ ಇಹಲೋಕ ಹಾಗೂ ಪರಲೋಕದಲ್ಲಿ ಯಶಸ್ಸು ಸಿಗುತ್ತದೆ ಎಂದು ಹೇಳಿದರು. ಪ್ರತಿಯೊಬ್ಬ ಮುಸ್ಲಿಂ ನಿರಂತರವಾಗಿ ಸತ್ಪಥದಲ್ಲಿ ನಡೆಯಲು ಪ್ರಯತ್ನಿಸಬೇಕು ಎಂದು ಕರೆ ನೀಡಿದರು.

ಜಗತ್ತಿನ ವಿವಿಧ ಭಾಗಗಳಲ್ಲಿ ಮುಸ್ಲಿಮರು ಸಂಕಷ್ಟ ಹಾಗೂ ಯುದ್ಧದ ನಡುವೆಯೇ ಜೀವನ ಸಾಗಿಸುತ್ತಿರುವುದು ವಿಷಾದನೀಯ. ಇಂತಹ ಸಂದರ್ಭದಲ್ಲಿ ವಿಶ್ವದಲ್ಲಿ ಶಾಂತಿ,



ಸಹಿಷ್ಣುತೆ ಹಾಗೂ ಮಾನವೀಯತೆ ನೆಲೆಸಬೇಕು. ಎಲ್ಲರೂ ಭ್ರಾತೃತ್ವ ಮತ್ತು ಸಹೋದರತ್ವವನ್ನು ಅಳವಡಿಸಿಕೊಂಡು ಪರಸ್ಪರ ಪ್ರೀತಿ ಹಾಗೂ ಸಹಕಾರದಿಂದ ಬದುಕಬೇಕು ಎಂದು ಅವರು ತಿಳಿಸಿದರು.

ರಂಜಾನ್ ತಿಂಗಳು ಇಸ್ಲಾಂ ಧರ್ಮದಲ್ಲಿ ಅತ್ಯಂತ ಪವಿತ್ರವಾಗಿದ್ದು, ಈ ಅವಧಿಯಲ್ಲಿ ಮುಸ್ಲಿಮರು ಉಪವಾಸದ ಮೂಲಕ ಆತ್ಮಶುದ್ಧಿ, ಸಹನೆ ಹಾಗೂ ಶಿಸ್ತಿನ ಜೀವನವನ್ನು ಅಭ್ಯಾಸ ಮಾಡುತ್ತಾರೆ. ಮುಂಜಾನೆಯಿಂದ ಮುಂಜಾವರವರೆಗೆ ಆಹಾರ ಮತ್ತು ನೀರನ್ನು ತ್ಯಜಿಸುವ ಮೂಲಕ ಭಕ್ತಿ, ನಿಯಮ ಹಾಗೂ ಮಾನವೀಯ ಮೌಲ್ಯಗಳನ್ನು ಅರಿತುಕೊಳ್ಳುತ್ತಾರೆ. ಉಪವಾಸದ ಮೂಲಕ ಬಡವರ ನೋವನ್ನು ಮನಗಂಡು ಸಹಾನುಭೂತಿ ಮತ್ತು ದಯೆಯನ್ನು ಬೆಳೆಸಿಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ಹಬ್ಬದ ಪ್ರಯುಕ್ತ ಮನೆಮನೆಗಳಲ್ಲಿ ವಿಶೇಷ ಊಟಗಳನ್ನು ತಯಾರಿಸಿ, ಬಂಧು-ಬಳಗದವರನ್ನು ಆಹ್ವಾನಿಸಿ ಆತಿಥ್ಯ ನೀಡಲಾಯಿತು. ಮಕ್ಕಳು ಹೊಸ ಬಟ್ಟೆ ಧರಿಸಿ ಸಂಭ್ರಮದಿಂದ ಹಬ್ಬದಲ್ಲಿ ಭಾಗವಹಿಸಿದರು. ಒಟ್ಟಿನಲ್ಲಿ ಈದ್-ಉಲ್-ಫಿತರ್ ಹಬ್ಬವು ಸಂಭ್ರಮದಿಂದ ಆಚರಿಸಲಾಯಿತು.

ಪಟ್ಟಣದ ಎಲ್ಲಾ ಜುಮಾ ಮಸೀದಿಗಳು ಹಾಗೂ ಈದ್ಗಾಗಳಲ್ಲಿ ಸಾಮೂಹಿಕ ನಮಾಝ್, ಖುತ್ಬಾ ಮತ್ತು ಪ್ರವಚನಗಳು ನಡೆದವು. ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಪರಸ್ಪರ ಹಸ್ತಲಾಘವ ಮತ್ತು ಆಲಿಂಗನದ ಮೂಲಕ ಸಂತೋಷವನ್ನು ಹಂಚಿಕೊಂಡರು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಮುರಳಿ ಮೋಹನ್ ಶುಭಾಶಯ ಕೋರಿದರು.

ಪಟ್ಟಣದ ಬದ್ರಿಯಾ ಜುಮಾ ಮಸೀದಿಯಲ್ಲಿ ಅಬ್ದುಲ್ ರಜಾಕ್ ಸಖಾಫಿ ಪ್ರಾರ್ಥನೆಗೆ ನೇತೃತ್ವ ನೀಡಿದರು. ಈದ್ಗಾ ಮೈದಾನದಿಂದ ಪಟ್ಟಣದ ಜಾಮಿಯ ಮಸೀದಿವರೆಗೆ ಸಾವಿರಾರು ಮುಸ್ಲಿಂ ಬಾಂಧವರು ಮೆರವಣಿಗೆ ನಡೆಸಿದರು.

ಜಾಮಿಯಾ ಲಬಾಬಿನ್ ಮಸೀದಿ ಅಧ್ಯಕ್ಷ ಅಮ್ಜದ್ ಸಾಬ್, ಬದ್ರಿಯಾ ಜುಮಾ ಮಸೀದಿ ಆಡಳಿತ ಸಮಿತಿ ಅಧ್ಯಕ್ಷ ಯಾದ್ಗಾರ್ ಜಾಕೀರ್ ಹುದಾ ಮಸೀದಿಯ ಅಧ್ಯಕ್ಷ ಜಾಕೀರ್, ಆದಂ ಹಾಜಿ ಇತರರಿದ್ದರು.

# ರಂಜಾನ್ ಅಂಗವಾಗಿ ಮುಸ್ಲಿಮರ ಸಾಮೂಹಿಕ ಪ್ರಾರ್ಥನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲೆಯ ವಿವಿಧ ಮಸೀದಿಗಳಲ್ಲಿ ರಂಜಾನ್ ಹಬ್ಬದ ಅಂಗವಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು.

ನಗರದ 80 ಅಡಿ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಭಾಗವಹಿಸಿ ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಶಯ ತಿಳಿಸಿದರು. ಹಳೇ ಈದ್ಗಾ ಸಮಿತಿ ಅಧ್ಯಕ್ಷ ಸಮೀರ್ ಖಾನ್ ಮಾತನಾಡಿ, ಪವಿತ್ರ ರಂಜಾನ್ ಮಾಸ ಮತ್ತು ಯುಗಾದಿ ಹಬ್ಬ ಒಂದೇ ಸಂದರ್ಭದಲ್ಲಿ ಬಂದಿರುವುದು ಸಮಾಜದಲ್ಲಿ ಸೌಹಾರ್ದ, ಸಹಿಷ್ಣುತೆ ಮತ್ತು ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಸಂಕೇತವಾಗಿದೆ ಎಂದರು.

ರಂಜಾನ್ ಮಾಸದಲ್ಲಿ ಮುಸ್ಲಿಂ ಸಮುದಾಯದವರು ಕಟ್ಟುನಿಟ್ಟಾಗಿ ಉಪವಾಸ ಆಚರಿಸುವುದು



ವಿಶೇಷ. ಪುಟ್ಟ ಮಕ್ಕಳಿಂದ ಹಿಡಿದು ಮಹಿಳೆಯರು, ವೃದ್ಧರು ಎಲ್ಲರೂ ಬೆಳಿಗ್ಗೆ 5 ಗಂಟೆಯಿಂದ ಸಂಜೆ 7ರ ವರೆಗೆ ಉಪವಾಸವಿದ್ದು, ದೇವರ ಆರಾಧನೆ, ಪ್ರಾರ್ಥನೆ ಹಾಗು ಧಾರ್ಮಿಕ ಚಿಂತನೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ ಎಂದರು.

ಉಪವಾಸವು ಕೇವಲ ದೇಹದ ನಿಯಂತ್ರಣವಷ್ಟೇ ಅಲ್ಲ, ಮನಸ್ಸಿನ ಶುದ್ಧೀಕರಣಕ್ಕೂ ಕಾರಣವಾಗುತ್ತದೆ. ಈ ಪವಿತ್ರ ತಿಂಗಳಲ್ಲಿ ಸಮಾಜಮುಖಿ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತವೆ. ಅನಾಥರು ಹಾಗೂ ಅಗತ್ಯವಿರುವವರನ್ನು ಗುರುತಿಸಿ ಅವರಿಗೆ ಆಹಾರ, ಹಣ ಹಾಗೂ ಅಗತ್ಯ ವಸ್ತುಗಳನ್ನು ನೀಡುವ ಮೂಲಕ ಮಾನವೀಯತೆ ತೋರಲಾಗುತ್ತದೆ. ಜಕಾತ್ ಮತ್ತು ದಾನ ಧರ್ಮಗಳ ಮೂಲಕ ಸಮಾಜದಲ್ಲಿ ಸಮಾನತೆ ಹಾಗೂ ಸಹಾನುಭೂತಿ ಬೆಳೆಸುವ ಪ್ರಯತ್ನ ನಡೆಯುತ್ತದೆ ಎಂದು ಹೇಳಿದರು.

### ಹೊಳೆನರಸೀಪುರದಲ್ಲಿ ರಂಜಾನ್

ಹೊಳೆನರಸೀಪುರದ ಈದ್ಗಾ ಮೈದಾನದಲ್ಲಿ ಹಮ್ಮಿಕೊಂಡಿದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ತಾಳ್ಮೆ, ಶಿಸ್ತು ಮತ್ತು ಬಡವರ ಹಸಿವಿನ ಕಷ್ಟವನ್ನು ಎಲ್ಲರಿಗೂ ಪರಿಚಯಿಸುವ ಮತ್ತು ದಾನ ಧರ್ಮದ ಬಗ್ಗೆ ಅರಿವು ಮೂಡಿಸುವ ಪವಿತ್ರ ರಂಜಾನ್ ಹಬ್ಬ ಎಲ್ಲರಿಗೂ ಒಳಿತು ಮಾಡಲಿ ಎಂದು ಆಶಿಸಿದರು.

ಸಮಾಜದಲ್ಲಿ ಶಾಂತಿ, ಸಹನೆ, ಸಹಿಷ್ಣುತೆ ಮತ್ತು ಸಮನ್ವಯ ಸಾಧಿಸಲು ಪವಿತ್ರ ರಂಜಾನ್ ಹಬ್ಬವು ಎಲ್ಲರಲ್ಲಿಯೂ ಪ್ರೇರಣೆ ನೀಡಲಿ ಎಂದು ಸಲಹೆ ನೀಡಿದರು.

ಮುಸ್ಲಿಂ ಸಮುದಾಯದ ವತಿಯಿಂದ ಸಂಸದರನ್ನು ಗೌರವಿಸಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದ ಬಾಂಧವರು ಸೇರಿ ಪ್ರಾರ್ಥನೆ ನಡೆಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಮುಸ್ಲಿಂ ಧರ್ಮ ಗುರುಗಳು ಸೇರಿ ಮಜಾಹಿದ್,ಇದ್ರೀಸ್ ಮತ್ತಿತರರಿದ್ದರು.

# ನೂರು ವರ್ಷ ಪೂರೈಸಿದ ಶಾಲೆಗಳಿಗೆ ಬೇಕಿದೆ ಅಭಿವೃದ್ಧಿ

## ಜಿಲ್ಲೆಯಲ್ಲಿವೆ 83 ಸರ್ಕಾರಿ ಶಾಲೆ | ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ನೂರು ವರ್ಷ ಪೂರೈಸಿರುವ 83 ಸರ್ಕಾರಿ ಕಿರಿಯ ಹಾಗು ಹಿರಿಯ ಪ್ರಾಥಮಿಕ ಶಾಲೆಗಳಿದ್ದು, ಅವುಗಳ ಅಭಿವೃದ್ಧಿಗೆ ಸರ್ಕಾರ ಕಾಯಕಲ್ಪ ತೋರಬೇಕಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಅಸ್ತಿತ್ವ ಪಡೆದ ಶಾಲೆಗಳಿಗೆ ತನ್ನದೇಯಾದ ಮಹತ್ವವಿದೆ. ಇಂದಿಗೂ ಅನೇಕ ಶಾಲೆಗಳಲ್ಲಿ 400ಕ್ಕಿಂತ ಅಧಿಕ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಮತ್ತೆ ಕೆಲವೆಡೆ ಕಟ್ಟಡ ಶಿಥಿಲಾವಸ್ಥೆ ತಲುಪಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಕುಸಿದಿದೆ. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಅನೇಕರು ಉನ್ನತ ಸ್ಥಾನಮಾನಗಳನ್ನು ಗಳಿಸಿದ್ದಾರೆ. ಈ ಹಿನ್ನಲೆಯಲ್ಲಿ ಸರ್ಕಾರ ಶತಮಾನ ಪೂರೈಸಿದ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದರಲ್ಲೂ ದುರಸ್ತಿ ಕಾಮಗಾರಿ ಆಗಲೇಬೇಕಿರುವ 27 ಶಾಲೆಗಳಿಗೆ ತಲಾ 1 ಕೋಟಿ ರೂ. ಅನುದಾನ ನೀಡುವಂತೆ ಎರಡು ತಿಂಗಳ ಹಿಂದೆಯೇ ಮನವಿ ಸಲ್ಲಿಸಲಾಗಿದೆ. ಆದರೆ ಈ ವರೆಗೆ ಅನುದಾನ ಬಿಡುಗಡೆ ಕುರಿತು ಭರವಸೆ ಸಿಕ್ಕಿಲ್ಲ.

### ಶತಮಾನ ಪೂರೈಸಿದ ಶಾಲೆಗಳು

ಜಿಲ್ಲೆಯಲ್ಲಿ 2442 ಸರ್ಕಾರಿ ಶಾಲಾ ಕಟ್ಟಡಗಳಿದ್ದು ಅದರಲ್ಲಿ 83 ಶಾಲೆಗಳು ಆರಂಭವಾಗಿ ನೂರು ವರ್ಷ ಪೂರ್ಣಗೊಳಿಸಿರುವುದು ಹೆಮ್ಮೆಯ ವಿಚಾರ. ಆಲೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಮರಸು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಆಲೂರಿನ ನೂತನ ಹಿರಿಯ ಪ್ರಾಥಮಿಕ ಶಾಲೆ, ಸಿಂಗಾಪುರ, ದೊಡ್ಡಕಣಗಾಲು, ಅರಕಲಗೂಡು ತಾಲ್ಲೂಕಿನ ದುಮ್ಮಿಕೊಪ್ಪಲು ಸರ್ಕಾರಿ ಶಾಲೆ, ಅರಕಲಗೂಡು ಪೇಟೆ, ಮುಸವತ್ತೂರು, ಕೊಳ್ಳಂಗಿ, ಬೆಳವಾಡಿ, ಕೋಟೆ ಅರಕಲಗೂಡು, ಕೊಣನೂರು, ಕೊರಟೀಕೆರೆ, ಮಲ್ಲಿಪಟ್ಟಣ, ಅರಸೀಕೆರೆ ತಾಲ್ಲೂಕಿನ ಕುರುವಂಕ, ಬೆಂಗುಂಬ, ಕಣಕಟ್ಟೆ, ಡಿ.ಎಂ.ಕುರ್ಕೆ, ಕಾಮಸಮುದ್ರ, ಹರಳಕಟ್ಟೆ, ಮಾಡಾಳು, ಸಶಿವಾಳ, ಜೆ.ಸಿ.ಪುರ, ಯರೇಹಳ್ಳಿ, ಉಂಡಿಗನಾಳು, ನೇರ್ಲಗೆ, ಜಾವಗಲ್, ಹಂದ್ರಾಳು, ಬಿ.ಹೆಚ್.ರಸ್ತೆ, ಕೆಲ್ಲಂಗೆರೆ, ನಾಗರಹಳ್ಳಿ, ಚಗಚಗೆರೆ, ಬಾಣಾವರ, ಹಾರನಹಳ್ಳಿ, ಕಲ್ಲುಂಡಿ, ಅರಸೀಕೆರೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಅಗ್ಗುಂದ, ಬೇಲೂರು ತಾಲ್ಲೂಕಿನಲ್ಲಿ ಜಿಹೆಚ್‌ಪಿಎಸ್ ಕೋಟೆ ಶಾಲೆ, ಅರೇಹಳ್ಳಿ ಜಿಯುಹೆಚ್‌ಪಿಎಸ್, ಹಳೇಬೀಡು ಜಿಹೆಚ್‌ಪಿಎಸ್, ಕೋಟೆ ಬೇಲೂರು, ಮುತ್ತುಗನ್ನೆ, ಬಂಟೇನಹಳ್ಳಿ, ಅಡಗೂರು, ಗೋಣಿಸೋಮನಹಳ್ಳಿ, ಚಿಲ್ಕೂರು, ಕೆಸಗೋಡು, ಜಿಹೆಚ್‌ಪಿಎಸ್ ಅರೇಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚನ್ನರಾಯಪಟ್ಟಣ ಬಿಇಒ ಹಿಂಭಾಗದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನುಗ್ಗೇಹಳ್ಳಿ ಕರ್ನಾಟಕ ಪಬ್ಲಿಕ್ ಶಾಲೆ, ಶ್ರವಣಬೆಳಗೊಳ, ಮತಿಗಟ್ಟ ಶಾಲೆ, ಹಾಸನದ ವಾಣಿವಿಲಾಸ, ಮಲ್ಲದೇವರಪುರ, ಶಾಂತಿಗ್ರಾಮ, ಶಂಕರನಹಳ್ಳಿ, ಆರ್‌ಸಿ ರಸ್ತೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರಧಾನ ಸ.ಹಿ.ಪ್ರಾ. ಶಾಲೆ, ಹೆರಗು, ದೊಡ್ಡಗೇಣಿಗೆರೆ, ಅಮಿರ್ ಮೊಹಲ್ಲಾ ಕಿರಿಯ ಪ್ರಾಥಮಿಕ ಶಾಲೆ, ಹೊಳೆನರಸೀಪುರ ತಾಲ್ಲೂಕಿನ ನಗರನಹಳ್ಳಿ, ಕ್ಯಾತನಹಳ್ಳಿ, ಬಾಗೀವಾಳು, ಹಿರೇಬೆಳಗುಲಿ, ಹರದನಹಳ್ಳಿ, ತಾತನಹಳ್ಳಿ, ಜಿಕೆಬಿಎಂಎಸ್, ಮೂಡಲಹಿಪ್ಪೆ, ದಾಳಗೌಡನಹಳ್ಳಿ, ಜಿಎಂಹೆಚ್‌ಪಿಎಸ್ ಹಳ್ಳಿಮೈಸೂರು, ನಿಡುವಣಿ, ಸಕಲೇಶಪುರ ತಾಲ್ಲೂಕಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಹಾನುಬಾಳು, ಬೆಳಗೋಡು, ದೇವಾಲಯದಕೆರೆ, ಉದೇವಾರ, ಬೆಳಗೋಡು, ಗೊಳಗೊಂಡೆ, ಅರೆಕೆರೆ, ಈಶ್ವರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ಆರಂಭವಾಗಿ ನೂರು ವರ್ಷ ಪೂರೈಸಿದ್ದು ಹೆಮ್ಮೆಯ ವಿಚಾರವಾಗಿದೆ.



### ಕೆಲ ಶಾಲೆಗಳಲ್ಲಷ್ಟೇ ಸಂಭ್ರಮ

**ಸರ್ಕಾರಿ ಶಾಲೆಯೊಂದು ಆರಂಭವಾಗಿ ನೂರು ವರ್ಷ ಪೂರೈಸಿದ್ದಕ್ಕೆ ಶತಮಾನೋತ್ಸವ, ಗುರು ವಂದನೆ, ಪ್ರತಿಭಾ ಪುರಸ್ಕಾರದಂತಹ ಕಾರ್ಯಕ್ರಮಗಳ ಮೂಲಕ ಶಾಲೆಯ ಘನತೆ ಹೆಚ್ಚಿಸುವ ಕೆಲಸಗಳು ಹಳೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಂದ ನಡೆಯುತ್ತವೆ. ಆದರೆ, ದಾಖಲಾತಿ ಕಡಿಮೆ ಇರುವ, ನಗರ ಅಥವಾ ಪಟ್ಟಣಗಳಿಂದ ದೂರವಿರುವ ಶಾಲೆಗಳಿಗೆ ಈ ಭಾಗ್ಯ ಇಲ್ಲದಾಗಿದೆ. ಕುಗ್ರಾಮದಲ್ಲಿರುವ ಶತಮಾನ ಪೂರೈಸಿರುವ ಶಾಲೆಗಳತ್ತ ಸರ್ಕಾರ ಹಾಗು ಜನಪ್ರತಿನಿಧಿಗಳು ಗಮನ ಹರಿಸಬೇಕಿದೆ.**

### ಕಟ್ಟಡ ಕಾಮಗಾರಿಗೆ ಬೇಕಿದೆ ಆದ್ಯತೆ

ಪ್ರಸ್ತುತ ದಿನಗಳಲ್ಲಿ ಸರ್ಕಾರಿ ಶಾಲೆಗಳು ಮುಚ್ಚುವ ಹಂತ ತಲುಪಿದೆ. ಖಾಸಗಿ ಶಾಲೆಗಳ ವ್ಯಾಮೋಹದಿಂದ ಪೋಷಕರು ಸಹ ಸರ್ಕಾರಿ ಶಾಲೆಗಳಿಂದ ತಮ್ಮ ಮಕ್ಕಳನ್ನು ವಿಮುಖರನ್ನಾಗಿಸುತ್ತಿದ್ದಾರೆ. ಇಂತಹ ಸವಾಲಿನ ನಡುವೆಯೂ ಬಡಮಕ್ಕಳಿಗೆ ಉಚಿತ ಶಿಕ್ಷಣ ಕಲ್ಪಿಸಬೇಕೆಂಬ ಉದ್ದೇಶದಿಂದ ಶಿಕ್ಷಕರು ಸಾಕಷ್ಟು ಪರಿಶ್ರಮದಿಂದ ಶಾಲೆ ಉಳಿಸಿಕೊಳ್ಳಲು ನಿತ್ಯ ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ, ಕೆಲವೆಡೆ ಕಟ್ಟಡಗಳು ಸಂಪೂರ್ಣ ಶಿಥಿಲಾವಸ್ಥೆ ತಲುಪಿವೆ. ವಾರ್ಷಿಕವಾಗಿ ದೊರೆಯುವ ಅನುದಾನದಿಂದ ಅಲ್ಪಸ್ವಲ್ಪ ಕಾಮಗಾರಿ ಕೈಗೊಳ್ಳಲಾಗುತ್ತದೆಯಾದರೂ ಪೂರ್ಣ ಕೆಲಸಕ್ಕೆ ಹೆಚ್ಚುವರಿ ಅನುದಾನದ ಅವಶ್ಯಕತೆ ಹೆಚ್ಚಿದೆ. ತರಗತಿ ಕೊಠಡಿ, ಅಡುಗೆ ಮನೆ, ಕಾಂಪೌಂಡ್, ಕಿಟಕಿಗಳ ನಿರ್ವಹಣೆ, ಆಟದ ಮೈದಾನ ಹೀಗೆ ನಾನಾ ಕೆಲಸಗಳು ತುರ್ತಾಗಿ ಆಗಬೇಕಿದೆ.

# ಕೊಣನೂರು ಕೆರೆ ಏರಿ ದುರಸ್ತಿಗೆ ಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಕೊಣನೂರು: ಕುಸಿದಿದ್ದ ಕೆರೆ ಏರಿ ಮೇಲಿನ ರಸ್ತೆ ದುರಸ್ತಿ ಕಾರ್ಯ ಭರದಿಂದ ಸಾಗಿದೆ. ಕಾಮಗಾರಿಯನ್ನು ಕಾವೇರಿ ನೀರಾವರಿ ನಿಗಮದಿಂದ 1.88 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

ರಸ್ತೆ ಕುಸಿದಿದ್ದ ಸ್ಥಳದಲ್ಲಿ ಸುಮಾರು 150 ಮೀಟರ್ ಉದ್ದಕ್ಕೂ ರಸ್ತೆ ನಿರ್ಮಾಣಕ್ಕಾಗಿ ಹಾಕಿದ್ದ ಮಣ್ಣನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ. ಈ ರಸ್ತೆ ಕೊಡಗು ಹಾಗೂ ಕೊಣನೂರಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗವಾಗಿರುವುದರಿಂದ, ಕಾಮಗಾರಿ ಗುಣಮಟ್ಟದಿಂದ ನಡೆಯಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಒಂದೂವರೆ ವರ್ಷದ ಹಿಂದೆ ಇಲ್ಲಿನ ದೊಡ್ಡ ಕೆರೆ ಏರಿ ಮೇಲಿನ ರಸ್ತೆಯಲ್ಲಿ ಮಣ್ಣು ಕುಸಿದ ಪರಿಣಾಮ ರಸ್ತೆಯಲ್ಲಿ ವಾಹನ ಸಂಚಾರ ಹಾಗು ಕೆರೆಯಲ್ಲಿ ನೀರು ಸಂಗ್ರಹಣೆಗೆ ತೊಂದರೆಯುಂಟಾಗಿತ್ತು. ಈ ಕೆರೆಗೆ ಹಾರಂಗಿ ಮತ್ತು ಹೇಮಾವತಿ ನಾಲೆಗಳ ನೀರು ಸೇರುವುದರಿಂದ ಹೆಚ್ಚಿನ ಪ್ರಮಾಣದ ನೀರು ಸಂಗ್ರಹವಾಗಿ ಕೆರೆ ಏರಿ ಮೇಲೆ ಒತ್ತಡ ಹೆಚ್ಚಾಗುತ್ತಿತ್ತು. ಒತ್ತಡ ಕಡಿಮೆ ಮಾಡಲು ಕೆರೆಯ ತೂಬನ್ನು ಒಡೆದು, ಹೆಚ್ಚುವರಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಲಾಗಿತ್ತು.

ಇದೀಗ ಕೆರೆ ಏರಿ ದುರಸ್ತಿಗೊಳಿಸುವ ಕಾರ್ಯ ಪ್ರಾರಂಭವಾಗಿದೆ. ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಕೆರೆಯ ಗೋಡು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿರುವುದರಿಂದ, ರೈತರು ತಮ್ಮ ಜಮೀನಿಗೆ ಬಳಸಿಕೊಳ್ಳಲು ಟ್ರ್ಯಾಕ್ಟರ್‌ಗಳಲ್ಲಿ ಮಣ್ಣು ಸಾಗಿಸುತ್ತಿದ್ದಾರೆ.

# 4 ಕೋ.ರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಕ್ಯಾನಹಳ್ಳಿ, ಬ್ಯಾಕರವಳ್ಳಿ, ಹೆತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 4 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಸಿಮೆಂಟ್ ಮಂಜು ಭೂಮಿಪೂಜೆ ನೆರವೇರಿಸಿದರು.

ಕ್ಯಾನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಹುದಶಕಗಳ ಬೇಡಿಕೆಯಾಗಿದ್ದ ಆಲುವಳ್ಳಿ, ಕಡಗರವಳ್ಳಿ, ನೋದರಹಳ್ಳಿ ಹೊಸಗದ್ದೆ ಗ್ರಾಮಗಳಿಗೆ ಸಂಪರ್ಕಿಸುವ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಈ ರಸ್ತೆಯ 3 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿದೆ.

ಬ್ಯಾಕರವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಕೆರೆ ಮುಖ್ಯರಸ್ತೆಯಿಂದ ಬ್ಯಾಗದೀಣೆ ಗ್ರಾಮದ ವರೆಗೆ 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಇದೇ ವೇಳೆ ಬ್ಯಾಕರವಳ್ಳಿ ಗ್ರಾಮದ ಪರಿಮಿತಿಯಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಗ್ರಾಮದಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಕುಂದು ಕೊರತೆಗಳ ಕುರಿತು ಶಾಸಕ ಸಿಮೆಂಟ್ ಮಂಜು ಅವರು ಸ್ಥಳೀಯರಿಂದ ಮಾಹಿತಿ ಪಡೆದುಕೊಂಡರು.

ಹೆತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆತ್ತೂರು ಬಿ ಬ್ಲಾಕ್ ನಿಂದ ಬಸವನಗುಡಿವರೆಗೆ 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ನಿರ್ಮಾಣ ಕಾಮಗಾರಿಗೆ ಹಾಗು 32.5ಲಕ್ಷ ರೂ ವೆಚ್ಚದಲ್ಲಿ ವಿದ್ಯಾನಗರದಿಂದ ಕರ್ನಾಟಕ ಪಬ್ಲಿಕ್ ಶಾಲೆಗೆ ಸಂಪರ್ಕಿಸುವ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಅದೇ ರೀತಿ 20 ಲಕ್ಷ ರೂ. ವೆಚ್ಚದಲ್ಲಿ ಹೆತ್ತೂರು ಗ್ರಾಮ ಪಂಚಾಯಿತಿ ಹಾಡ್ಯ ಗ್ರಾಮದಿಂದ ರಾಮೇಶ್ವರ ದೇವಾಲಯದ ವರೆಗೆ ಸಂಪರ್ಕಿಸುವ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

# ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 6 ಲಕ್ಷ ಪ್ರಕರಣ ಇತ್ಯರ್ಥ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಜಿಲ್ಲೆಯ 6,18,580 ಪ್ರಕರಣಗಳು ಬಗೆಹರಿಸಿ, 72,44,18,606 ರೂ. ವಸೂಲಿ ಮಾಡಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ತಿಳಿಸಿದರು.

ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಈ ವರ್ಷದಲ್ಲಿ ನಡೆಸಲಾದ ಮೊದಲ ರಾಷ್ಟ್ರೀಯ ಲೋಕ ಅದಾಲತ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಎಲ್ಲರ ಸಹಕಾರದೊಂದಿಗೆ ಯಶಸ್ವಿಗೊಂಡಿದೆ ಎಂದು ತಿಳಿಸಿದರು.

ಜಿಲ್ಲೆಯ 42 ನ್ಯಾಯಾಲಯಗಳ 95,402 ಪ್ರಕರಣಗಳ ಪೈಕಿ, ರಾಷ್ಟ್ರೀಯ ಲೋಕ ಅದಾಲತ್‌ಗಾಗಿ ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ 7,998 ಪ್ರಕರಣಗಳು ಹಾಗು 6,21,730 ವ್ಯಾಜ್ಯಪೂರ್ವ ಪ್ರಕರಣಗಳನ್ನು ಗುರುತಿಸಲಾಗಿತ್ತು. ಇದರಲ್ಲಿ ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ 4,262 ಪ್ರಕರಣಗಳು ಹಾಗು 6,14,318 ವ್ಯಾಜ್ಯಪೂರ್ವ ಪ್ರಕರಣಗಳು ಇತ್ಯರ್ಥಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು. ಲೋಕ ಅದಾಲತ್‌ನಲ್ಲಿ 73 ಬಗೆಹರಿಸಬಹುದಾದ ಕ್ರಿಮಿನಲ್ ಪ್ರಕರಣಗಳು, 285 ಚೆಕ್ ಬೌನ್ಸ್ ಪ್ರಕರಣಗಳು, 142 ಬ್ಯಾಂಕ್ ರಿಕವರಿ ಪ್ರಕರಣಗಳು, 54 ವಿದ್ಯುತ್ ಕಾಯ್ದೆಯ ಪ್ರಕರಣಗಳು, 36 ಭೂಸ್ವಾಧೀನ ಪ್ರಕರಣಗಳು, 250 ಮೋಟರ್ ವಾಹನ ಪರಿಹಾರ ಪ್ರಕರಣಗಳು, 53 ಕೌಟುಂಬಿಕ ಪ್ರಕರಣಗಳು, 496 ಇತರೆ ಸಿವಿಲ್ ಪ್ರಕರಣಗಳು, 2,222 ಇತರೆ ಕ್ರಿಮಿನಲ್ ಪ್ರಕರಣಗಳು, ಆರು ಕಾರ್ಮಿಕ ಪ್ರಕರಣಗಳು, 645 ಜನನ ನೋಂದಣಿ ಪ್ರಕರಣಗಳು ಎಲ್ಲವೂ ಸೇರಿ ಒಟ್ಟು 4,262 ನ್ಯಾಯಾಲಯದ ಪ್ರಕರಣಗಳಾಗಿವೆ ಎಂದು ತಿಳಿಸಿದರು.

238 ವ್ಯಾಜ್ಯ ಪೂರ್ವ ಬ್ಯಾಂಕ್ ಸಾಲ ಮರುಪಾವತಿ ಪ್ರಕರಣಗಳು, 15,364 ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳು, 2 ಗ್ರಾಹಕರ ನ್ಯಾಯಾಲಯದ ಪ್ರಕರಣಗಳು, 5,98,714 ನೀರಿನ ಮತ್ತು ಮನೆ ಕಂದಾಯದ ಪ್ರಕರಣಗಳು ಸೇರಿ 6,14,318 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. ಜಿಲ್ಲೆಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ಏಕಕಾಲಕ್ಕೆ ನಡೆಸಲಾದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಕಕ್ಷಿದಾರರಿಗೆ ಹಣ, ಸಮಯದ ಉಳಿತಾಯ ಆಗಿದ್ದು ಅನುಕೂಲವಾಗಿದೆ ಎಂದು ತಿಳಿಸಿದರು.

# ಸಂಭ್ರಮದ ಪುರದಮ್ಮ ದೇವಿ ಜಾತ್ರಾ ಮಹೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಬೀಕನಹಳ್ಳಿ ಗ್ರಾಮದ ಶ್ರೀ ಪುರದಮ್ಮ ದೇವಿಯ ಜಾತ್ರಾ ಮಹೋತ್ಸವದ ಜರುಗಿತು. ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಸೇರಿ ಹಲವು ಗಣ್ಯರು ಭಾಗವಹಿಸಿ ದೇವಿಯ ದರ್ಶನ ಪಡೆದರು.



ರಥೋತ್ಸವದಲ್ಲಿ ಜಿಲ್ಲೆ ಮಾತ್ರವಲ್ಲದೆ ರಾಜ್ಯದ ನಾನಾ ಭಾಗಗಳಿಂದ ಹೆಚ್ಚಿನ ಸಂಖ್ಯೆಯ ಭಕ್ತರು, ಪುರದಮ್ಮ ದೇವಿಯ ಆರಾಧಕರು ಭಾಗಿಯಾಗಿ ಅಲಂಕೃತ ರಥ ಎಳೆದು ಸಂಭ್ರಮಿಸಿದರು. ಜಾತ್ರೆಯ ಮೊದಲ ದಿನವಾದ ಗುರುವಾರ ಮುಂಜಾನೆ 5 ಗಂಟೆಗೆ ಶ್ರೀ ರಾಮದೇವರ ಹಳ್ಳದಿಂದ ಅಡ್ಡಪಲ್ಲಕ್ಕಿ ಉತ್ಸವದ ಮೂಲಕ ಗಂಗೆ ತರುವ ವಿಧಿ ವಿಧಾನಗಳಿಂದ ಜಾತ್ರಾಮಹೋತ್ಸವ ಪ್ರಾರಂಭವಾಯಿತು.

2ನೇ ದಿನವಾದ ಶುಕ್ರವಾರ ಮುಂಜಾನೆ 4 ರಿಂದ 5 ಗಂಟೆ ವೇಳೆಗೆ ಶ್ರೀ ಚೌಡೇಶ್ವರಿ-ಪುರದಮ್ಮ ಅವರಿಗೆ ಪೂಜಾ ಕಾರ್ಯಕ್ರಮ ಕೈಗೊಂಡು, ಬೆಳಿಗ್ಗೆ 8 ರಿಂದ 9 ಗಂಟೆ ವೇಳೆಗೆ ರಥೋತ್ಸವ ದೇವಾಲಯದ ಆವರಣದಿಂದ ಬೀಕನಹಳ್ಳಿ ಗ್ರಾಮದೊಳಗೆ, ದೇವಾಲಯದ ಸುತ್ತಲಿನ ರಸ್ತೆ ಮಾರ್ಗವಾಗಿ ಸಾಗಿತು. ಸಂಜೆ 7 ಗಂಟೆಗೆ ಉತ್ಸವ ಮೂರ್ತಿಯ ಮೆರವಣಿಗೆ ದೇವಾಲಯ ಆವರಣದಿಂದ ಸೊಪ್ಪಿನಹಳ್ಳಿ ಗ್ರಾಮದವರೆಗೆ ನಡೆಯಿತು.

ಆ ಗ್ರಾಮದಲ್ಲಿ ಹಿಂದಿನಿಂದ ಜಾತ್ರಾ ಮಹೋತ್ಸವ ನೆರವೇರಿಸುತ್ತಿದ್ದ ಮೂಲ ಕುಟುಂಬಸ್ಥರಿಂದ ಮತ್ತು ಸೇವಾರ್ಥಿಗಳಿಂದ ಧಾರ್ಮಿಕ ವಿಧಿವಿಧಾನ ಕಾರ್ಯ ಸೇರಿ ನೆರೆಹೊರೆಯ ಗ್ರಾಮಗಳ ಸಮಸ್ತ ಗ್ರಾಮಸ್ಥರ ಮತ್ತು ಭಕ್ತಾದಿಗಳ ಪಾಲ್ಗೊಳ್ಳುವಿಕೆಯಲ್ಲಿ ಮತ್ತು ಸಹಕಾರದಲ್ಲಿ ಮೆರವಣಿಗೆ ನೆರವೇರಿತು. ರಾತ್ರಿ ಉತ್ಸವ ಮೂರ್ತಿ ಮೆರವಣಿಗೆಯು ದೇವಾಲಯ ಆವರಣಕ್ಕೆ ಬಂದು ಸೇರಿತು. ಜಾತ್ರಾ ಮಹೋತ್ಸವ ಶಾಂತಿ ಮತ್ತು ಸುವ್ಯವಸ್ಥೆಗಳೊಂದಿಗೆ ಪೊಲೀಸ್ ಇಲಾಖೆ ಸಹಕಾರದಲ್ಲಿ ನೆರವೇರಿತು.

ದೇವಾಲಯ ಆಡಳಿತಾಧಿಕಾರಿಗಳಾದ ಯು.ಎಂ. ಪ್ರಕಾಶ್ ಕುಮಾರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಂಗಸ್ವಾಮಿ, ದರ್ಶನ್, ಪಿಎಸ್ಐ ಕುಮಾರ್, ಯಲಗುಂದ ಪಿಡಿಒ ವೇಣುಗೋಪಾಲ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಯಶಸ್ವಿನಿ, ಆರ್‌ಐ ಯತೀಶ್, ಮುಖಂಡರಾದ ಶಾಂತಾರಾಜೇಗೌಡ, ನಾರಾಯಣಗೌಡ, ಶಿವಣ್ಣ, ಸುನಿಲ್ ಪ್ರಕಾಶ್, ಬ್ಯಾಂಕ್ ವ್ಯವಸ್ಥಾಪಕರಾದ ಸೋಮಶೇಖರ್, ವ್ಯವಸ್ಥಾಪನಾ ಸಮಿತಿ ಸದಸ್ಯರು, ಇಲಾಖಾ ಸಿಬ್ಬಂದಿ, ಗ್ರಾಮಸ್ಥರು ಇದ್ದರು.

# ಇಸ್ಪೀಟ್ ಆಟವಾಡಲು ಹೋದವನ ನಿಗೂಢ ಸಾವು: ತನಿಖೆಗೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ಯುಗಾದಿ ಹಬ್ಬದ ಮಾರನೇ ದಿನ ಸ್ನೇಹಿತರೊಂದಿಗೆ ಇಸ್ಪೀಟ್ ಆಡಲು ತೆರಳಿದ್ದ ಯುವಕ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾನೆ.

ಜಾವಗಲ್ ಹೋಬಳಿ ಅರಕೆರೆ ಗ್ರಾಮದ ಪ್ರವೀಣ್ (38) ಮೃತರು. ತಾವರೆಹಳ್ಳಿಯ ನಿರ್ಜನ ಪ್ರದೇಶದಲ್ಲಿ ಶನಿವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಜಾವಗಲ್ ಠಾಣೆ ಪೊಲೀಸರು ಭೇಟಿ ನೀಡಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಹಾಸನದ ಹಿಮ್ಸ್‌ಗೆ ರವಾನಿಸಿದ್ದಾರೆ.

ಚಾಲಕನಾಗಿದ್ದ ಪ್ರವೀಣ್ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಕೆಲಸಕ್ಕೆ ಹೋಗುತ್ತಿದ್ದೇನೆಂದು ಮನೆಯವರಿಗೆ ಹೇಳಿ ಹೋದವನು ರಾತ್ರಿಯಾದರೂ ವಾಪಾಸ್ಸಾಗಿರಲಿಲ್ಲ. ರಾತ್ರಿ 10 ಗಂಟೆಗೆ ಕರೆ ಮಾಡಿದಾಗ ಅರಕೆರೆ ಬಸ್ ನಿಲ್ದಾಣದ ಬಳಿಯೇ ಇದ್ದು ಬರುತ್ತೇನೆಂದು ಹೇಳಿದ್ದ. ಆದರೆ ರಾತ್ರಿ 11 ಗಂಟೆಗೂ ಬಾರದಿದ್ದಾಗ ತಂದೆ ಕರೆ ಮಾಡಿದ್ದು ಆಗ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಮಾರನೇ ದಿನ ಬೆಳಿಗ್ಗೆ ಸಂಬಂಧಿಕರು ಕರೆ ಮಾಡಿ ತಾವರೆಹಳ್ಳಿಯ ಜಮೀನೊಂದರಲ್ಲಿ ಪ್ರವೀಣ್ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ. ಸಾವಿನ ಬಗ್ಗೆ ಅನುಮಾನವಿದ್ದು ಸೂಕ್ತ ತನಿಖೆ ನಡೆಸಬೇಕೆಂದು ದೂರಿನಲ್ಲಿ ತಂದೆ ನರಸಿಂಹಮೂರ್ತಿ ಆಗ್ರಹಿಸಿದ್ದಾರೆ. ಸಾವಿನ ಸುತ್ತ ಸಾಕಷ್ಟು ಅನುಮಾನಗಳು ಹುಟ್ಟಿಕೊಂಡಿದ್ದು ಮರಣೋತ್ತರ ಪರೀಕ್ಷೆ ಬಳಿಕ ಸತ್ಯಾಂಶ ತಿಳಿದು ಬರಲಿದೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಾನಸಿಕ ರೋಗಗಳ ಅರಿವು

**- ಪ್ರಶಾಂತ್‌ಎನ್.ಆರ್, ಆಪ್ತಸಲಹಾ ಮನಃಶಾಸ್ತ್ರಜ್ಞರು**

ನಿಮಗೆ ಅಥವಾ ನಿಮಗೆ ಪರಿಚಯವಿರುವ, ಯಾರಾದರು ಒಬ್ಬರಿಗೆ ಮಾನಸಿಕ ತೊಂದರೆ ಇದೆಯೆಂದು ತಿಳಿದುಬಂದರೆ ನಿಮಗೆ ಹೇಗೆ ಅನಿಸಬಹುದು. ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಕೋಟಿಗಟ್ಟಲೆ ಜನರಿಗೆ ಮಾನಸಿಕ ತೊಂದರೆಗಳಿವೆ. ಇದು ಅವರ ಬಂಧು ಮಿತ್ರರ ಬದುಕನ್ನೂ ಬಾಧಿಸುತ್ತದೆ. ಗಂಡು, ಹೆಣ್ಣು, ವಯಸ್ಸು, ಸಂಸ್ಕೃತಿ, ಜಾತಿ, ಧರ್ಮ, ಬಡವ, ಶ್ರೀಮಂತ ಎನ್ನುವ ಯಾವುದೇ ಬೇಧವಿಲ್ಲದೆ ಮಾನಸಿಕ ರೋಗಗಳು ಬಾಧಿಸಬಲ್ಲವು. ಜೀವನದ ಒಂದಲ್ಲಾ ಒಂದು ಹಂತದಲ್ಲಿ ಪ್ರತಿ ನಾಲ್ಕು ಜನರಲ್ಲಿ ಒಬ್ಬನು ಯಾವುದಾದರೊಂದು ಮಾನಸಿಕ ತೊಂದರೆಗೆ ಒಳಗಾಗುತ್ತಾನೆ ಎಂಬುದು ಅಧ್ಯಯನವೊಂದರ ವರದಿ. ಹೆಚ್ಚಿನವರನ್ನು ಬಾಧಿಸುವ ಖಾಯಿಲೆಗಳೆಂದರೆ ಮನೋವಿಕೃತಿಗಳಾದ ಉನ್ಮಾದ ವಿಷಣ್ಣತಾ ರೋಗ (ಮ್ಯಾನಿಕ್ ಡಿಪ್ರೆಸಿವ್ ಸೈಕೊಸಿಸ್) ಹಾಗು ಸ್ಕಿಜೋಫ್ರೇನಿಯಾಗಳು, ಎಷ್ಟು ಗಂಭೀರವಾದ ಮಾನಸಿಕ ಖಾಯಿಲೆಗಳೆಂದರೆ ದೈನಂದಿನ ಕೆಲಸಗಳನ್ನು ಮಾಡಿಕೊಳ್ಳಲೂ ಕಷ್ಟವಾಗುತ್ತದೆ. ಈ ಮನೋರೋಗಗಳನ್ನು ಬಹಳ ಬೇಗ ಇತರರು ಗುರುತಿಸಬಹುದು, ಅಷ್ಟರ ಮಟ್ಟಿಗೆ ವರ್ತನಾ ವೈಪರೀತ್ಯವಿರುತ್ತದೆ.



ಕೆಲವು ಮಾನಸಿಕ ರೋಗಗಳಿಂದ ಬಹಳ ಜನರು ಬಳಲುತಿದ್ದರೂ ಅದನ್ನು ಹೆಚ್ಚಾಗಿ ಮುಚ್ಚಿಡಲಾಗುತ್ತದೆ ಅಥವಾ ನಿರ್ಲಕ್ಷಿಸಲಾಗುತ್ತದೆ. ಏಕೆಂದರೆ ಅವು ತೀವ್ರ ವರ್ತನಾ ವೈಪರೀತ್ಯದಿಂದ ಕೂಡಿರುವುದಿಲ್ಲ. ಸೂಕ್ಷ್ಮವಾಗಿ ಗಮನಿಸದ ಹೊರತು ತಿಳಿಯುವುದಿಲ್ಲ. ಉಧಾಹರಣೆಗೆ ಆಮನೋಬೇನೆಆಗಳಾದ ಹಿಸ್ಟೀರಿಯಾ, ಗೀಳುಚಟ, ಫೋಬಿಯಾ ಇತ್ಯಾದಿಗಳು. ಇವುಗಳಲ್ಲದೆ ಆಮನೋದೈಹಿಕ ರೋಗಗಳುಆ ಅಂದರೆ ಮಾನಸಿಕ ಕಾರಣಗಳಿಂದ ದೈಹಿಕ ರೋಗಗಳು ಕಾಣಿಸಿಕೊಳ್ಳುತ್ತವೆ. ಅಲ್ಸರ್, ಆಸ್ತಮಾ, ಕಜ್ಜಿ, ಅಲರ್ಜಿಗಳು, ಮೈಗ್ರೇನ್ ತಲೆ ನೋವು, ಬ್ಲಡ್ ಪ್ರಷರ್ ಇತ್ಯಾದಿಗಳು ಕೆಲವು ಉದಾಹರಣೆಗಳಾಗಿವೆ. ತಮಗೆ ಅಥವಾ ತಮ್ಮ ಮನೆಯವರಿಗೆ ಮಾನಸಿಕ ಖಾಯಿಲೆಯಿದೆಯೆಂದು ಅನೇಕರು ಹೇಳಿಕೊಳ್ಳಲು ಇಷ್ಟಪಡುವುದಿಲ್ಲ. ಬೇರೆಯವರಿಗೆ ತಿಳಿದರೆ ಅವಮಾನವಾಗುತ್ತದೆ ಎಂದು ಭಾವಿಸಿ ಚಿಕಿತ್ಸೆ ಪಡೆಯಲು ಮುಂದೆ ಬರುವುದಿಲ್ಲ ಎಂಬುದು ವಿಶ್ವ ಆರೋಗ್ಯ ಸಂಸ್ಥೆಯ ಅಭಿಪ್ರಾಯ. ಹೆಚ್ಚಿನ ಮಾನಸಿಕ ಖಾಯಿಲೆಗಳಿಗೆ ಚಿಕಿತ್ಸೆ ಇದೆಯಾದರೂ ಅಂತಹ ಖಾಯಿಲೆಯಿರುವವರಲ್ಲಿ ಸುಮಾರು ಶೇ. ಅರವತ್ತರಷ್ಟು ವಯಸ್ಕರು ಹಾಗು ಶೇಕಡ ಐವತ್ತರಷ್ಟು ಎಂಟರಿಂದ ಹದಿನೈದು ವರ್ಷದ ಮಕ್ಕಳು ಸರಿಯಾದ ಚಿಕಿತ್ಸೆಗೆ ಒಳಗಾಗುವುದಿಲ್ಲ ಎಂಬ ವಿಷಾದಕರ ಸಂಗತಿಯನ್ನು ಒಂದು ವರದಿ ಪ್ರಕಟಿಸಿದೆ.

### ಮಾನಸಿಕ ಖಾಯಿಲೆ ಎಂದರೇನು?

ಒಬ್ಬ ವ್ಯಕ್ತಿಯ ಯೋಚನೆ, ಭಾವನೆ, ನಡೆ-ನುಡಿ ಮತ್ತು ವರ್ತನೆಯಲ್ಲಾಗುವ ಗಂಭೀರ ಬದಲಾವಣೆಯೇ ಮಾನಸಿಕ ತೊಂದರೆ ಎಂದು ಪರಿಗಣಿಸಲಾಗುತ್ತದೆ. ವ್ಯಕ್ತಿಗೆ ಈ ರೀತಿಯ ತೊಂದರೆ ಇದ್ದರೆ ಆತನಿಗೆ ಅಥವಾ ಆಕೆಗೆ ಇತರರ ಜೊತೆ ಹಾಗು ತನ್ನ ಪರಿಸರದ ಜೊತೆಗೆ ಹೊಂದಿಕೊಂಡು ಹೋಗಲು ಮತ್ತು ತನ್ನ ದೈನಂದಿನ ಜೀವನ ನಿಭಾಯಿಸಲು ಕಷ್ಟವಾಗುತ್ತದೆ.

ಮಾನಸಿಕ ತೊಂದರೆ ಇರುವವರಿಗೆ ಸೂಕ್ತ ವೈದ್ಯಕೀಯಚಿಕಿತ್ಸೆ ಕೊಟ್ಟು ಆರೈಕೆ ಮಾಡುವುದರಿಂದ ಅವರು ಸಾರ್ಥಕ ತೃಪ್ತಿಕರ ಬದುಕನ್ನು ನಡೆಸಬಲ್ಲರು. ಮಾನಸಿಕ ಆರೋಗ್ಯ ತಜ್ಞರು ಅನೇಕ ಮಾನಸಿಕ ತೊಂದರೆಗಳಿಗೆ ಸರಿಯಾದ ಚಿಕಿತ್ಸೆ ಕೊಡಬಲ್ಲರು. ಹಾಗಾಗಿ ಅನುಭವಿ ತಜ್ಞರೊಬ್ಬರ ಅಭಿಪ್ರಾಯ ಪಡೆಯುವುದೆ ಮುಖ್ಯವಾದ ಮೊದಲ ಹೆಜ್ಜೆ. ಮಾನಸಿಕ ರೋಗಗಳು, ಕಾರಣಗಳು, ಪರಿಣಾಮಗಳನ್ನು ಪ್ರತಿಯೊಬ್ಬರೂ ತಿಳಿದಿದ್ದರೆ ಮಾನಸಿಕ ರೋಗಿಗಳ ಸಂಖ್ಯೆಯನ್ನು ಹಾಗು ರೋಗದ ಪ್ರಮಾಣವನ್ನು ತಗ್ಗಿಸಬಹುದು. ಚಿಕಿತ್ಸೆಯ ಸಂಪೂರ್ಣ ಪ್ರಯೋಜನ ಪಡೆಯಬೇಕೆಂದರೆ ಮಾನಸಿಕ ತೊಂದರೆಯುಳ್ಳವರು ಸರಿಯಾದ ಚಿಕಿತ್ಸೆ ಪಡೆಯಬೇಕು. ಚಿಕಿತ್ಸೆ ಪಡೆಯಬೇಕೆಂದರೆ ಮೊದಲು ಮಾನಸಿಕ ಕಾಯಿಲೆಯ ಬಗ್ಗೆ ಮಾತನಾಡಲು ಇರುವ ಹಿಂಜರಿಕೆಯನ್ನು ಮೆಟ್ಟಿ ನಿಲ್ಲಬೇಕು. ಈ ಚಿಕಿತ್ಸೆಯಲ್ಲಿ ತರಬೇತಿ ಪಡೆದಿರುವ ಮಾನಸಿಕ ಆರೂಗ್ಯ ತಜ್ಞರೊಂದಿಗೆ ಮಾತನಾಡುವುದೂ ಸೇರಿದೆ. ಖಾಯಿಲೆ ಯಾವುದೆಂದು ಅರ್ಥ ಮಾಡಿಕೊಳ್ಳಲು, ಖಾಯಿಲೆಯಿಂದಾಗಿ ದಿನವೂ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಲು ಹಾಗು ಚಿಕಿತ್ಸೆಯನ್ನು ಮಧ್ಯದಲ್ಲೆ ನಿಲ್ಲಿಸದಿರಲು ಈ ತಜ್ಞರು ಸಹಾಯ ಮಾಡಬಲ್ಲರು. ಈ ತೊಂದರೆ ಇರುವವರು ತಜ್ಞರನ್ನು ಭೇಟಿಯಾದಾಗ ಕುಟುಂಬದ ಸದಸ್ಯರು ಇಲ್ಲವೆ ಮಿತ್ರರು ಧೈರ್ಯ ತುಂಬುವುದು, ಮಾನಸಿಕ ಬೆಂಬಲ ಕೊಡುವುದು ಬಹು ಮುಖ್ಯ. ಇದರಿಂದಾಗಿ ಮಾನಸಿಕ ಸಮಸ್ಯೆಯುಳ್ಳ ವ್ಯಕ್ತಿ ಬಹಳ ಬೇಗ ಚಿಕಿತ್ಸೆಗೆ ಸ್ಪಂದಿಸುವುದು ಹಾಗು ಗುಣಮುಖನಾಗುವುದು ಸಾಧ್ಯವಾಗುತ್ತದೆ.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-22

1916: ಚೀನಾದ ಸಾಮ್ರಾಜ್ಯದ ಅಂತ್ಯಕ್ಕೆ ಮುಕ್ತಾಯವಾಗಿ, ಚೀನಾ ಗಣರಾಜ್ಯ ವ್ಯವಸ್ಥೆಗೆ ಬಲವರ್ಧನೆ ಆಯಿತು.
1945: ಅರಬ್ ಲೀಗ್ ಸ್ಥಾಪನೆಯಾಯಿತು.
1993: ಕ್ಷಯರೋಗ ಕುರಿತು ಜಾಗೃತಿ ಮೂಡಿಸಲು ವಿಶ್ವ ಕ್ಷಯರೋಗ ದಿನ ಘೋಷಿಸಲಾಯಿತು.

**ಜನನ**

1942: ಸ್ಟೀಫನ್ ಸೊನ್ಡೈಮ್, ಪ್ರಸಿದ್ಧ ಸಂಗೀತ ನಿರ್ದೇಶಕ ಮತ್ತು ರಂಗಭೂಮಿ ಕಲೆಗಾರ

**ನಿಧನ**

1727: ಐಸಾಕ್ ನ್ಯೂಟನ್, ವಿಜ್ಞಾನ ಲೋಕದ ಮಹಾನ್ ವ್ಯಕ್ತಿ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248